ಭಾವವನ್ನೂ ಕಾಣಿಸಿದರು. ಅದು, ತನ್ನ ಒಡೆಯರನ್ನು ಕಾಪಾಡುವ ಹೊಣೆ ಹೊತ್ತು ಸಹನಶೀಲ ಗಾಂಭೀರ್ಯದಿಂದ ನಡೆಯುತ್ತಿದೆ.

ಇಷ್ಟೊಂದು ಕರುಣೆಯುಳ್ಳ ಜಾನುವಾರು, ನಿಕೃಷ್ಟತೆಯ ಸಂಕೇತವಾಗಿದ್ದು ಹೇಗೆ? ಅದರಲ್ಲೂ ಮರಳನಾಡುಗಳಲ್ಲಿ ದೃಢತೆ–ಶ್ರಮ ಪ್ರತಿನಿಧಿಸುವ ಇದು, ಚಳಿದೇಶಗಳಲ್ಲಿ ಮೂರ್ಖತನದ ಪ್ರತೀಕವಾಯಿತು. ಕತ್ತೆಯನ್ನು ಶೇಕ್ಸ್‌ಪಿಯರ್ ಮೂರ್ಖರಿಗೆ ಹೋಲಿಸುತ್ತಾನೆ. ಸಾತ್ವಿಕರನ್ನು ಅಪಮಾನಿಸಿ ಈತ ಅದೆಂತು ಜಗತ್ತಿನ ಶ್ರೇಷ್ಠ ನಾಟಕಕಾರನಾದನೊ ಎಂತೊ? ಇನ್ನು ನಮ್ಮಲ್ಲಿರುವ ನುಡಿಗಟ್ಟು ಕಾಣಿ: ಕತ್ತೆಕಾಯಿ, ಕತ್ತೆಭಡವಾ, ಕತ್ತೆಚಾಕರಿ, ಕತ್ತೆಬಾಲ ಹೋಯಿತು, ಎರಡು ಕತ್ತೆ ವಯಸ್ಸಾಗಿದೆ– ಒಂದೇ ಎರಡೇ? ಯಾರಿಗಾದರೂ ಅಪಮಾನಿಸುವುದಾದಲ್ಲಿ, ತಲೆಬೋಳಿಸಿ ಪಾದರಕ್ಷಾ ಮಾಲೆ ತೊಡಿಸಿ, ಕತ್ತೆಮೇಲೆ ಮೆರವಣಿಗೆ ತೆಗೆವುದೂ ಇದೆ. ನಮ್ಮ ಶಿಕ್ಷಕರೊಬ್ಬರು, ತಮ್ಮ ಪ್ರಿಯಶಿಷ್ಯರು ಹೋಂವರ್ಕ್ ಮಾಡದೆ ಬಂದಾಗ, ಬೆತ್ತವನ್ನು ಚಮಕಾಯಿಸುವ ಮುನ್ನ 'ಬರ್ತಾಬರ್ತಾ ರಾಯರ ಕುದುರೆ ಕತ್ತೆಯಾಯಿತು' ಮಂತ್ರ ಪಠಿಸುತ್ತಿದ್ದರು. 'ಇಲ್ಲಿ ಯಾರೂ ಮುಖ್ಯರಲ್ಲ' ಎಂದು ಉಗ್ಗಡಿಸಿದ ಸಮದರ್ಶಿ ಕವಿಗಳೇ 'ಉತ್ತರದ ಕಾಶಿಯಲ್ಲಿ ಮಿಂದೈದು ಬಂದ ಕತ್ತೆಯನು ದಕ್ಷಿಣದಲ್ಲಿ ಕುದುರೆಯೆನ್ನಬಹುದೇ?' ಎಂದರೆ, ಉಳಿದವರನ್ನೆಂತು ದೂಷಿಸುವುದು? ವಿಭಿನ್ನ ಪ್ರಾಣಿಗಳ ತೌಲನಿಕ ಅಧ್ಯಯನವೇ ಉಚಿತವಲ್ಲ. ಸೇಬನ್ನು ಕಿತ್ತಲೆಯ ಜತೆಗಿಟ್ಟು ಬೆಲೆಗಟ್ಟುವುದರಿಂದ ಏನು ಪ್ರಯೋಜನ? ಇನ್ನೊಬ್ಬರನ್ನು ಕೀಳುಗಳೆದೇ ತಮ್ಮ ಹಿರಿಮೆ ಪ್ರದರ್ಶಿಸುವುದು ಸಭ್ಯತೆಯಲ್ಲ. ಕೆಲವು ಪ್ರಯೋಗಶೀಲರು ಕತ್ತೆ ಸಂತತಿಯನ್ನು ಅಳಿಸುವ ಇರಾದೆಯಿಂದ ಕತ್ತೆ–ಕುದುರೆಗಳ ರಸಕೂಟ ನಡೆಸಿ ಹೇಸರಗತ್ತೆಯನ್ನೂ ಸೃಷ್ಟಿಸಿದರು. ಕೊನೆಗೆ, ಅವರಿಗೆ ಎತ್ತಿಹಾಕೊ ಕುದುರೆಗಿಂತ ಹೊತ್ತುಹೋಗುವ ಕತ್ತೆ ಲೇಸೆಂಬ ಜ್ಞಾನೋದಯವಾಯಿತು. ಗಟ್ಟಿಗರು ಬದುಕುತ್ತಾರೆ ಎಂಬ ಡಾರ್ವಿನ್ ಸಿದ್ಧಾಂತ ಮತ್ತೊಮ್ಮೆ ಸಾಬೀತಾಯಿತು.

ಕತ್ತೆಗಳ ಕೇಶಲೋಕದಲ್ಲಿ ಬಣ್ಣಗಳಿವೆ. ಮೇಲುಕೀಳಿಲ್ಲ. ಆದರೆ, ಹಯಜಗತ್ತಿನಲ್ಲಿ ಉಚ್ಚೈಶ್ರವಸ್ಸು ದೇವತೆಗಳಿಗೆ, ಶ್ವೇತಾಶ್ವ ರಾಜರಿಗೆ, ಕುಲೀನರಿಗೆ ಲೋಹಿತಾಶ್ವ ಎಂದು ಹಂಚಲಾಗಿದೆ. ಉಳಿದವರಿಗೆ ಕತ್ತೆಯೇ ಗತಿಯೆಂದು ಇದರರ್ಥ. ಕೆಲವು ಹಳ್ಳಿಗಳಲ್ಲಿ ಕೆಳಜಾತಿಯವರು ಮದುವಣಿಗನ ಕುದುರೆ ಸವಾರಿ ಮಾಡಿಸುವಂತಿಲ್ಲ. ಕಟ್ಟಳೆ ಮೀರಿ ಮೆರವಣಿಗೆ ತೆಗೆದಲ್ಲಿ, ಕುದುರೆಯನ್ನೂ ವರನನ್ನೂ ಚಚ್ಚಿ ಹಾಕುವುದುಂಟು. ಬ್ರಹ್ಮಚರ್ಯದ ಅಮೂಲ್ಯ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲಿರುವ ವ್ಯಕ್ತಿ, ಯಾವ ಪ್ರಾಣಿಯ ಮೇಲೇರಿ ಬಂದರೇನಂತೆ. ಪ್ರಶ್ನೆಯಿರುವುದು, ಕತ್ತೆಗೆ ಮೀಸಲಾದವರು ಅಶ್ವಾರೋಹಣದ ಧಾರ್ಷ್ಟ್ಯ ಮಾಡಿದರಲ್ಲ ಎಂಬ ಜಾತ್ಯಸ್ಥರ ಸಿಟ್ಟು. ಕತ್ತೆ ವಿಶ್ವಾಮಿತ್ರ ಸೃಷ್ಟಿಯಂತೆ, ಚಾಂಡಾಲರ ಸೊತ್ತಂತೆ. ಸರ್ಕಾರದ ನೀತಿ ವಿರೋಧಿಸಲು ಕತ್ತೆ ಮೆರವಣಿಗೆ ಮಾಡುವವರ ಮನಃಸ್ಥಿತಿ ಇನ್ನೂ ಕೆಟ್ಟದ್ದು. ಸ್ಕೂಲು ತಪ್ಪಿಸಿ ಕೆರೆಯಲ್ಲಿ ಕೇಳಿಯಾಡುತ್ತಿದ್ದ ಹುಡುಗರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದಂತೆ, ಊರಂಚಿನಲ್ಲಿ ತಮ್ಮ ಪಾಡಿಗೆ ಮೇದುಕೊಂಡಿದ್ದ ಪ್ರಾಣಿಗಳನ್ನು ಎಳೆತಂದು, ಕೆಲಸ ಮುಗಿದ ಬಳಿಕ ವಿಧಾನಸೌಧದ ಎದುರು ಬಿಟ್ಟುಹೋಗುವರು. ಇತ್ತ ಮೋಟಾರು ಭೋರ್ಗರೆವ ರಸ್ತೆ; ಅತ್ತ ಬಿಟ್ಟುಕೊಳ್ಳದ ಕಬ್ಬನ್‌ಪಾರ್ಕು–ಎಲ್ಲಿ ಹೋಗಬೇಕು ಅವು? ದನದ ತೊಪ್ಪೆಯಿಂದ ಅಂಗಳ ಸಾರಣೆ ಮಾಡುವ ಮಂದಿ, ಚೌಕಾಕಾರದಲ್ಲಿ ಶೋಭಿಸುವ ಲದ್ದಿಯನ್ನು, ಅದು ಒಳ್ಳೆಯ ಗೊಬ್ಬರವಾಗಿದ್ದರೂ, ಇಶಿಶಿ ಎನ್ನುತ್ತಾರೆ. ಸ್ತ್ರೀವಾದಿಯಾದ ಸಂಚಿ ಹೊನ್ನಮ್ಮ ಬದುಕಿದ್ದರೆ 'ಕತ್ತೆಕತ್ತೆಗಳೆಂದೇಕೆ ಬೀಳುಗಳೆವರು ಬುದ್ಧಿಯಿಲ್ಲದ ಗಾವಿಲರು' ಎಂದು ಖಂಡಿತ ಹೇಳುತ್ತಿದ್ದಳು.

ವಜ್ರವನ್ನು ಕಲ್ಲಹರಳೆಂದು ಭಾವಿಸುವ ಮೂರ್ಖರು ಕಟ್ಟಿದ ಕತೆಗಳಿಗೆ ಲೆಕ್ಕವಿಲ್ಲ. ಒಮ್ಮೆ ಕತ್ತೆ, 'ನನ್ನ ಜಾಣತನದ ಮೇಲೂ ಕತೆ ಕಟ್ಟು' ಎಂದು ಈಸೋಪನಿಗೆ ವಿನಂತಿಸಿತಂತೆ. ಆ ನೀತಿಕತೆಗಾರ,